# ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 80 ಎಂಎಂಬಿ 2010

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 15.09.2012

**ಇಂದ,**
ಸರ್ಕಾರದ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ,

**ಇವರಿಗೆ,**
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ನೀರಾವರಿ ನಿಗಮ ನಿಯಮಿತ,
ಕಾಫೀ ಬೋರ್ಡ್ ಕಟ್ಟಡ,
ಬೆಂಗಳೂರು.

ಕರ್ನಾಟಕ ನೀರಾವರಿ ನಿಗಮ ನಿಯಮಿತ
ನಂ. 2018
20 SEP 2012
ಬೆಂಗಳೂರು - 560 001.

ಮಾನ್ಯರೇ,

ವಿಷಯ:- ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾ. ವ್ಯಾಪ್ತಿಯ ರಾಣಿಕೆರೆ ಪೂರಕ ನಾಲೆಯ ಪುನಃಶ್ಚೇತನ ಹಾಗೂ ಆಧುನೀಕರಣದ ಬಗ್ಗೆ.

ಉಲ್ಲೇಖ:- ಸರ್ಕಾರಿ ಆದೇಶ ಸಂ. ಜಸಂಇ 80 ಎಂಎಂಬಿ 2010, ದಿ: 28.06.2012.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಆದೇಶದಲ್ಲಿ ರಾಣಿಕೆರೆ ಪೂರಕ ನಾಲೆಯ **ಪುನಃಶ್ಚೇತನ ಹಾಗೂ ಆಧುನೀಕರಣ ಕಾಮಗಾರಿಯ ಅಂದಾಜಿಗೆ** ಆಡಳಿತಾತ್ಮಕ ಅನುಮೋದನೆ **ನೀಡುತ್ತಾ, ಯೋಜನೆಗೆ ಆಯವ್ಯಯದಲ್ಲಿ** ಒದಗಿಸಲಾಗಿರುವ ಅನುದಾನದೊಂದಿಗೆ **ಕಾಮಗಾರಿಯನ್ನು** ನಿಗಮಕ್ಕೆ ವರ್ಗಾಯಿಸ**ಲಾಯಿತು. ಆದುದರಿಂದ** ಸದರಿ ಅನುದಾನವನ್ನು ನಿಗಮಕ್ಕೆ **ವರ್ಗಾಯಿಸಲು ನಿಯಮಾನುಸಾರ ಸೂಕ್ತ ಪ್ರಸ್ತಾವನೆಯನ್ನು** ಆರ್ಥಿಕ ಇಲಾಖೆಗೆ ಕಳುಹಿಸಿ ಮುಂದಿನ **ಕ್ರಮ ಕೈಗೊಳ್ಳುವಂತೆ ತಮ್ಮನ್ನು ಕೋರಲು ಆದೇಶಿತನಾಗಿದ್ದೇನೆ.**

ತಮ್ಮ ನಂಬುಗೆಯ,

15/9/12
(ಸಿ.ಶ್ರೀನಿವಾಸಲು)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-1)
ಜಲಸಂಪನ್ಮೂಲ ಇಲಾಖೆ.

# ಕರ್ನಾಟಕ ಸರ್ಕಾರದ ನಡವಳಿಗಳು

## (ಜಲಸಂಪನ್ಮೂಲ ಇಲಾಖೆ)

ವಿಷಯ :- ಚಿತ್ರದುರ್ಗ ಜಿಲ್ಲೆಯ ರಾಣಿಕೆರೆ ಪೂರಕ ನಾಲೆಯ ಪುನಃಶ್ಚೇತನ ಹಾಗೂ ಆಧುನೀಕರಣ ಕಾಮಗಾರಿಯ ಅಂದಾಜಿಗೆ ಅನುಮೋದನೆ ನೀಡುವ ಬಗ್ಗೆ ಹಾಗೂ ಯೋಜನೆಯನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತಕ್ಕೆ ವರ್ಗಾಯಿಸುವ ಬಗ್ಗೆ.

ಓದಲಾಗಿದೆ :- ಮುಖ್ಯ ಇಂಜಿನಿಯರ್, ತುಂಗಾ ಮೇಲ್ದಂಡೆ ಯೋಜನಾ ವಲಯ, ಶಿವಮೊಗ್ಗರವರ ಪತ್ರ ಸಂಖ್ಯೆ : ಮು.ಇಂ : ಕ.ನೀ.ನಿ.ನಿ : ತುಂ.ಮೇ.ಯೋ.ವ : ಟಿಎ-2 : ಪಿಬಿ-9 : 2011-12 : 2600 : ದಿ: 21.09.2011, 5046 : ದಿ. 13.02.2012, 5227 : ದಿ. 18.2.2012

ಪ್ರಸ್ತಾವನೆ:-

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕು ತೀವ್ರ ಬರಗಾಲ ಪೀಡಿತ ಪ್ರದೇಶವಾಗಿದ್ದು, ಈ ತಾಲ್ಲೂಕಿನ ವಿಸ್ತೀರ್ಣದ ಶೇಕಡ ಹತ್ತರಷ್ಟು ಜಮೀನು ಮಾತ್ರ ನೀರಾವರಿಗೆ ಒಳಪಟ್ಟಿರುತ್ತದೆ. ವೇದವತಿ ನದಿಯು ಹಿರಿಯೂರು ತಾಲ್ಲೂಕಿನಲ್ಲಿ ಹರಿಯುವ ಪ್ರಮುಖ ನದಿಯಾಗಿದ್ದು, ಈ ನದಿಯು ತುಂಗಭದ್ರಾ ನದಿಯ ಉಪನದಿಯಾಗಿರುತ್ತದೆ. ವೇದಾವತಿ ನದಿಗೆ ಅಡ್ಡಲಾಗಿ ಹಿರಿಯೂರು, ಚಳ್ಳಕೆರೆ ತಾಲ್ಲೂಕುಗಳ ಗಡಿಯಲ್ಲಿ ಇರುವ ಸಿಡ್ಲಯ್ಯನ ಕೋಟೆ ಗ್ರಾಮದ ಬಳಿಯಲ್ಲಿ ನಾರಾಯಣಪುರ ಅಣೆಕಟ್ಟು ಎಂಬ ಅಣೆಕಟ್ಟನ್ನು ನಿರ್ಮಿಸಲಾಗಿದೆ. ಈ ಅಣೆಕಟ್ಟು 140 ಮೀಟರ್ ಉದ್ದವಿದ್ದು, 1132.50 ಕ್ಯೂಮೆಕ್ಸ್‌ಗಳ ನೀರು ಹೊರಬಿಡುವ ಸಾಮರ್ಥ್ಯ ಹೊಂದಿರುತ್ತದೆ. ಈ ಅಣೆಕಟ್ಟೆಯ ಬಲದಂಡೆ ಪೂರಕ ನಾಲೆಯ ಅಡಿಯಲ್ಲಿ 1295 ಹೆಕ್ಟೇರು ಜಮೀನಿಗೆ ನೀರುಣಿಸಿದೆ. ನಂತರ 394 ಹೆಕ್ಟೇರು ಜಮೀನಿನ ಅಚ್ಚುಕಟ್ಟನ್ನು ಹೊಂದಿರುವ ಪರಶುರಾಮಪುರ ಕೆರೆಗೆ ನೀರನ್ನು ಒದಗಿಸುತ್ತದೆ. ನಾರಾಯಣಪುರ ಅಣೆಕಟ್ಟೆಯಿಂದ ಎಡದಂಡೆ ಜಮೀನುಗಳಿಗೆ ನೀರಾವರಿ ಸೌಲಭ್ಯ ಒದಗಿಸುವ ಯಾವುದೇ ವ್ಯವಸ್ಥೆ ಇರುವುದಿಲ್ಲ. ವೇದಾವತಿ ನದಿಯ ಎಡದಂಡೆಯಲ್ಲಿ ಈ ನದಿಗೆ ಸೇರುವ ಗರನೀ ಹಳ್ಳಕ್ಕೆ ಅಡ್ಡಲಾಗಿ ಚಳ್ಳಕೆರೆ ತಾಲ್ಲೂಕಿನಲ್ಲಿ ರಾಣಿಕೆರೆ ಎಂಬ ಕೆರೆಯನ್ನು ನಿರ್ಮಿಸಲಾಗಿದೆ. ಈ ಕೆರೆಯು 15.59 ಮಿಲಿಯನ್ ಕ್ಯೂಬಿಕ್ ಮೀಟರ್ (543 ಮಿಲಿಯನ್ ಕ್ಯೂಬಿಕ್ ಫೀಟ್) ನೀರನ್ನು ಸಂಗ್ರಹಿಸುವ ಸಾಮರ್ಥ್ಯ ಹೊಂದಿರುತ್ತದೆ. ಈ ಕೆರೆಯ ಎಡ ಹಾಗೂ ಬಲದಂಡೆ ನಾಲೆಗಳು ಒಟ್ಟಾಗಿ 590 ಹೆಕ್ಟೇರು (1458 ಎಕರೆ) ಜಮೀನು ಅಚ್ಚುಕಟ್ಟನ್ನು ಹೊಂದಿರುತ್ತದೆ. ಆದರೆ ಈ ಕೆರೆಗೆ ಸಾಕಷ್ಟು ನೀರಿನ ಹರಿವು ಇರುವುದಿಲ್ಲ. ಆದುದರಿಂದ ಈ ಕೆರೆಯ ಕೆಳಗಿನ ಅಚ್ಚುಕಟ್ಟುದಾರರು ನೀರಿನ ಅಭಾವವನ್ನು ಎದುರಿಸುತ್ತಿದ್ದಾರೆ.

ರಾಣಿಕೆರೆ ಪೂರಕ ನಾಲೆಯಲ್ಲಿ ಸರಾಗವಾಗಿ ನೀರನ್ನು ಹರಿಸಿ ರಾಣಿಕೆರೆಗೆ ತಲಪುವಂತೆ ಮಾಡಲು ನಾಲೆಯ ಪುನಃಶ್ಚೇತನ ಹಾಗೂ ಆಧುನೀಕರಣದ ಸರ್ವೆ ಕಾರ್ಯವನ್ನು ಕೈಗೊಂಡಿದ್ದು, ಅಂದಾಜು ಪಟ್ಟಿಯನ್ನು ಒಟ್ಟಾರೆಯಾಗಿ ರೂ. 1600-00 ಲಕ್ಷಗಳಿಗೆ ತಯಾರಿಸಿದ್ದು, ಇದರಲ್ಲಿ ಪೂರಕ ನಾಲೆಯ ಪುನಃಶ್ಚೇತನ, 39 ಕಿ.ಮೀ. ಉದ್ದದ ಪೂರಕ ನಾಲೆಯಡಿಯಲ್ಲಿ ಬರುವ ಕಟ್ಟಡಗಳ ಅಭಿವೃದ್ಧಿ ಹಾಗೂ ನಾರಾಯಣಪುರ

ಅಣೆಕಟ್ಟೆಯ ಹೂಳು ತೆಗೆಯುವುದು ಸೇರಿರುತ್ತದೆ.ಈ ಹಿನ್ನಲೆಯಲ್ಲಿ ರೂ. 1600.00 ಲಕ್ಷಗಳ ಅಂದಾಜಿಗೆ ಅನುಮೋದನೆ ನೀಡುವಂತೆ ಹಾಗೂ ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡುವಂತೆ ಮುಖ್ಯ ಇಂಜಿನಿಯರ್, ತುಂಗಾ ಮೇಲ್ದಂಡೆ ಯೋಜನಾ ವಲಯ, ಶಿವಮೊಗ್ಗರವರು ಕೋರಿದ್ದಾರೆ.

ಸದರಿ ಪ್ರಸ್ತಾವನೆಯನ್ನು ದಿ. 23.12.2011ರಂದು ನಡೆದ ಜಲ ಸಂಪನ್ಮೂಲ ಇಲಾಖೆಯ ತಾಂತ್ರಿಕ ಸಲಹಾ ಸಮಿತಿಯ ಸಭೆಯಲ್ಲಿ ಮಂಡಿಸಲಾಗಿದ್ದು, ತಾಂತ್ರಿಕ ಸಲಹಾ ಸಮಿತಿಯು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಲವೊಂದು ಷರತ್ತಿಗಳಿಗೆ ಒಳಪಟ್ಟು ಅನುಮೋದನೆ ನೀಡಿರುತ್ತದೆ. ಸದರಿ ಷರತ್ತುಗಳಿಗೆ ಕ್ರಮ ಕೈಗೊಂಡು ಪಾಲನಾ ವರದಿಯನ್ನು ಮುಖ್ಯ ಇಂಜಿನಿಯರ್, ತುಂಗಾ ಮೇಲ್ದಂಡೆ ಯೋಜನಾ ವಲಯ, ಶಿವಮೊಗ್ಗರವರು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಜಸಂಇ 80 ಎಂಎಂಬಿ 2010</u>**

**<u>ಬೆಂಗಳೂರು, ದಿನಾಂಕ : 28.06.2012</u>**

ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ರಾಣಿಕೆರೆ ಪೂರಕ ನಾಲೆಯ ಪುನ:ಶ್ಚೇತನ ಹಾಗೂ ಆಧುನೀಕರಣ ಕಾಮಗಾರಿಯ ರೂ. 1600.00 ಲಕ್ಷಗಳ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಹಾಗೂ ಈ ಯೋಜನೆಗೆ ಆಯವ್ಯಯದಲ್ಲಿ ಒದಗಿಸಲಾಗಿರುವ ಅನುದಾನದೊಂದಿಗೆ ಕಾಮಗಾರಿಯನ್ನು ಕರ್ನಾಟಕ ನೀರಾವರಿ ನಿಗಮಕ್ಕೆ ವರ್ಗಾಯಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: PWD 166 FC-1/2012, ದಿ. 18.05.2012ರಲ್ಲಿ ನೀಡಿದ ಅಭಿಪ್ರಾಯದ ಅನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

28/6/12

(ಸಿ. ಶ್ರೀನಿವಾಸಲು)
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-1).
ಜಲ ಸಂಪನ್ಮೂಲ ಇಲಾಖೆ

<u>ಇವರಿಗೆ</u> :-

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು, (ಲೆಕ್ಕಪತ್ರ 1 ಮತ್ತು 2) ಹೊಸಕಟ್ಟಡ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ., ಬೆಂಗಳೂರು
4. ಮುಖ್ಯ ಇಂಜಿನಿಯರ್, ತುಂಗಾ ಮೇಲ್ದಂಡೆ ಯೋಜನಾ ವಲಯ, ಶಿವಮೊಗ್ಗ.
5. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು (ಸಚಿವ ಸಂಪುಟ), ವಿಷಯ ಸಂ: ಸಿ. 268/2012, ದಿ: 14.06.2012 ರ ಅನ್ವಯ.
6. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ, (ಲೋ.ಇ, ಆರ್ಥಿಕ ಕೋಶ), ವಿಧಾನ ಸೌಧ, ಬೆಂಗಳೂರು.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.